Mr. Speaker: We will take up a special discussion on this question tomorrow evening. Thanks for the provocation.

ಏಕಕಿಂಡಿ ವ್ಯವಸ್ಥೆ ಮೂಲಕ ಸಾಲ.

1477 - ಶ್ರೀ ಜಿ.ಎಸ್. ಆಚಾರ್ (ಬೈಂದೂರು): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಲ್ಪಾವಧಿ, ಮಧ್ಯಮಾವಧಿ, ದೀರ್ಘಾವಧಿ ಸಾಲಗಳನ್ನು ರಾಷ್ಟ್ರೀಕೃತ ಹಾಗೂ ವಾಣಿಜ್ಯ ಬ್ಯಾಂಕುಗಳಲ್ಲಿರುವಂತೆ ಸಹಕಾರಿ ರಂಗದಲ್ಲಿ ಸಹಾ "ಏಕ ಕಿಂಡಿ" ವ್ಯವಸ್ಥೆಯ ಮೂಲಕ ನೀಡುವ ಕುರಿತು ಸರಕಾರ ಪರ್ಯಾಲೋಚಿಸುವುದೇ?

ಆ) ಬೇರೆ ರಾಜ್ಯಗಳಲ್ಲಿ ಈ ಪ್ರಯೋಗ ನಡೆದಿರುವುದನ್ನು ಸರ್ಕಾರ ಗಮನಿಸಿದೆಯೇ?

ಇ) ಸರ್ಕಾರ ಈ ವಿಚಾರದಲ್ಲಿ ಸೂಕ್ತ ಕ್ರಮ ಕೈಗೊಳ್ಳುವುದೇ?

*ಶ್ರೀ ಕೆ.ಹೆಚ್. ಪಾಟೀಲ್, (ಸಹಕಾರ ಸಚಿವರು):

ಅ) ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಗಮನಿಸಿದೆ.

ಇ) ಪರಿಶೀಲಿಸಲಾಗುವುದು.

ಶ್ರೀ ಜಿ.ಎಸ್. ಆಚಾರ್: ಅಲ್ಪಾವಧಿ ಮತ್ತು ಮಧ್ಯಮಾವಧಿ, ದೀರ್ಘಾವಧಿ ಸಾಲಗಳನ್ನು ಏಕಕಿಂಡಿ ವ್ಯವಸ್ಥೆ ಮೂಲಕ ನೀಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ತಿಳಿಸಿದ್ದೀರಿ. ಆದರೆ ಸಾಲ ಬಾಕಿ ಇಲ್ಲ ಎನ್ನುವ ಧೃಡ ಪತ್ರ ಪಡೆಯಲಿಕ್ಕೆ ಸಾಕಷ್ಟು ವಿಳಂಬವಾಗುತ್ತಿದೆ. ಕೆಲವೊಮ್ಮೆಯಂತೂ ರೈತರಿಗೆ ಬಹಳ ವಿಳಂಬವಾಗುತ್ತಿದೆ. ಅದನ್ನು ತಪ್ಪಿಸುವುದಕ್ಕೆ ಏಕಕಿಂಡಿ ವ್ಯವಸ್ಥೆಯನ್ನು ಕರ್ನಾಟಕದಲ್ಲಿ ಸರ್ಕಾರ ಜಾರಿಗೊಳಿಸುವುದೇ? ಇದನ್ನು ಸಹಕಾರಿ ರಂಗದಲ್ಲಿ ಏಕೆ ತರಬಾರದು? ಆಂಧ್ರ ಪ್ರದೇಶದಲ್ಲಿ ಇದನ್ನು ತಂದಿದ್ದಾರೆ. ನಮ್ಮ ಅಧಿಕಾರಿಗಳು ಆಂಧ್ರಕ್ಕೆ ಹೋಗಿ ಅಧ್ಯಯನ ಮಾಡಿ ಬಂದಿದ್ದಾರೆ. ಕರ್ನಾಟಕದಲ್ಲಿ ಏಕೆ ಇದನ್ನು ತರುವುದಕ್ಕಾಗುವುದಿಲ್ಲ. ಅಥವಾ ಬೇರೆ ಬೇರೆ ವ್ಯವಸ್ಥೆ ಬೇಕೆಂದು ಹೇಳುವ ಕೆಲವು ಶಕ್ತಿಗಳು ಇದಕ್ಕೆ ತಡೆಯಾಗಿದ್ದಾರೆಯೇ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾದ ಅಭಿಪ್ರಾಯ ಹೇಳಬೇಕು.

ಶ್ರೀ ಕೆ.ಹೆಚ್. ಪಾಟೀಲ್: ಕರ್ನಾಟಕ ರಾಜ್ಯದಲ್ಲಿ ಒಂದೇ ಹಂತದ ಮುಖಾಂತರವಾಗಿ ಸಾಲ ವಿತರಣೆಯಾಗಬೇಕೆಂಬುದು ನನ್ನ ವೈಯಕ್ತಿಕ ಅಭಿಪ್ರಾಯ ಕೂಡ ಆಗಿದೆ. ಸರಕಾರ ಈ ದಿಶೆಯಲ್ಲಿ ವಿಚಾರ ಮಾಡುತ್ತಿದೆ. ಆದರೆ ಇದಕ್ಕಿರತಕ್ಕಂತಹ ಸಾಧಕ ಬಾಧಕಗಳನ್ನು ವಿಚಾರ ಮಾಡಿ ನಂತರ ಸಚಿವ ಸಂಪುಟದ ಮುಂದಿಟ್ಟು ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಈಗಾಗಲೇ ನಮ್ಮ ರಾಜ್ಯದ ರಿಜಿಸ್ಟ್ರಾರ್‌ರವರು ಬೇರೆ ಬೇರೆ ರಾಜ್ಯಗಳೊಡನೆ ಚರ್ಚೆ ಮಾಡಿ ಅಲ್ಲಿ ಮಾಡಿದಂತಹ ಅನುಭವಗಳನ್ನು ಆಧರಿಸಿ ಒಂದು ವರದಿಯನ್ನು ಕೊಟ್ಟಿದ್ದಾರೆ. ಆ ವರದಿ ಸರ್ಕಾರದ ಪರಿಶೀಲನೆಯಲ್ಲಿದೆ. ಅದು ಪರಿಶೀಲನೆಯಾದ ನಂತರ ಸಚಿವ ಸಂಪುಟದ ಎದುರಿಗಿಟ್ಟು ಅಲ್ಲಿ ತೆಗೆದುಕೊಂಡ ತೀರ್ಮಾನವನ್ನು ಈ ಸದನದ ಎದುರಿಗಿಡುತ್ತೇನೆ.

ಅರಣ್ಯ ತಪಾಸಣಾ ಕೇಂದ್ರ

1378 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ): ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಅರಣ್ಯ ತಪಾಸಣಾ ಚೆಕ್‌ಪೋಸ್ಟ್ ಸಂಖ್ಯೆ ಎಷ್ಟು?